# ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಮಹಿಳಾ ಸಬಲೀಕರಣ

**ಚಂದ್ರಾವತಿ ಶೆಟ್ಟಿ**

ಪ್ರಾಧ್ಯಾಪಕರು, ಶ್ರೀ ಶಾರದಾ ಕಾಲೇಜು, ಬಸ್ರೂರು.

DOI: https://doi.org/10.5281/zenodo.15504175

## ABSTRACT:

'ಸಂವಿಧಾನ ಶಿಲ್ಪಿ' 'ಬಾಬಾ ಸಾಹೇಬ್' ಎಂದು ಜನಪ್ರಿಯರಾಗಿರುವ ಡಾ. ಬಿ. ಆರ್. ಅಂಬೇಡ್ಕರ್‌ರು ಭಾರತ ದೇಶ ಕಂಡ ಬಹುದೊಡ್ಡ ಸಮಾಜ ಸುಧಾರಕ ನ್ಯಾಯಶಾಸ್ತ್ರಜ್ಞರೂ ಅರ್ಥಶಾಸ್ತ್ರಜ್ಞರೂ ಆಗಿರುವ ಬಿ. ಆರ್. ಅಂಬೇಡ್ಕರ್ ಅವರು ಮಾಹಾನ್ ಚಿಂತಕರು ಹೌದು. ಶ್ರೇಷ್ಠ ರಾಜಕೀಯ ನಾಯಕರಾಗಿರುವ ಇವರು ತಮ್ಮ ರಾಜಕೀಯ ಜೀವನದುದ್ದಕ್ಕೂ ಸಮಾಜದ ಕಲ್ಯಾಣಕ್ಕಾಗಿ ಮಹಿಳೆಯರು ಮತ್ತು ದೀನದಲಿತ ವರ್ಗಕ್ಕಾಗಿ ಕೆಲಸ ಮಾಡಿದರು.

ಎಲ್ಲಾ ಸಮಾಜಕ್ಕೂ ದಾರಿದೀಪರಾಗಿರುವ ಬಿ. ಆರ್. ಅಂಬೇಡ್ಕರ್ ಅವರು ಕೇವಲ ಒಂದು ವರ್ಗಕ್ಕಾಗಿ ಹೋರಾಟ ಮಾಡಿದ್ದಲ್ಲ. ಕಾರ್ಮಿಕರು, ರೈತರು ಮತ್ತು ಮಹಿಳೆಯರನ್ನು ಒಳಗೊಂಡಿರುವ 'ಅಸಮಾನ ಸಾಮಾಜಿಕ ವ್ಯವಸ್ಥೆ ಮತ್ತು ತುಳಿತಕ್ಕೊಳಗಾದ ವರ್ಗದ ಮಾನವ ಹಕ್ಕುಗಳ ಹೋರಾಟಗಾರರಾಗಿ ಹೋರಾಡಿದವರು ಜಡವಾದ ಸಮಾಜವನ್ನು ಪುನರುಜ್ಜೀವನಗೊಳಿಸಲು ಡಾ. ಬಿ. ಆರ್. ಅಂಬೇಡ್ಕರ್‌ ಮಾಡಿದ ಚಿಂತನೆಗಳು, ಪ್ರಯೋಗಗಳು ಹೋರಾಟಗಳು ಮಹತ್ವ ಪಡೆದು ಸಮ ಸಮಾಜಕ್ಕೆ ಸಹಬಾಳ್ವೆಗೆ ಪೂರಕವಾಗಿವೆ. ಹೀಗೆ ಅಂಬೇಡ್ಕರ್‌ರು ಶೋಷಿತ ಸಮುದಾಯದ ಹೋರಾಟಕ್ಕೆ ಬಹುದೊಡ್ಡ 'ಐಕಾನ್' ಆಗಿ ಹೊರಹೊಮ್ಮಿದರು, ಸ್ವಾಭಿಮಾನದ ಸಂಕೇತವಾದರು.

## KEYWORDS:

ಮಹಿಳೆ, ಹಿಂದೂ ಕೋಡ್ ಬಿಲ್, ಬಹುಪತ್ನಿತ್ವ, ವಿಚ್ಛೇದನ, ಮದುವೆ, ಆಸ್ತಿ ಹಕ್ಕು.

ಅಂಬೇಡ್ಕರ್ ಅವರನ್ನು ಓದಿಕೊಂಡಿರುವವರಿಗೆ ಅವರ ಮಹಿಳಾವಾದದ ಪರಿಚಯವಾಗದೇ ಇರಲಾರದು. ವಿದೇಶದಲ್ಲಿ ವಿದ್ಯಾಭ್ಯಾಸ ಪಡೆಯುತ್ತಿರುವಾಗಲೇ ಅಲ್ಲಿನ ಸ್ತ್ರೀಪರ ಚಿಂತನೆಗಳಿಗೆ ಆಕರ್ಷಿತರಾದವರು. ಒಂದು ದೇಶ ಅಭಿವೃದ್ಧಿ ಹೊಂದಬೇಕಾದರೆ ಅಲ್ಲಿ ಅಬಲೆಯಾಗಿ ಜೀವಿಸುತ್ತಿದ್ದ ಮಹಿಳೆ ಸಬಲೆಯಾಗಿ ಜೀವಿಸುವಂತಾಗಬೇಕು ಎಂಬುದನ್ನು ಮನಗಾಣುತ್ತಾರೆ. ಮಹಿಳಾ ಸಬಲೀಕರಣ ಎಂದರೆ ಮಹಿಳೆಯರಲ್ಲಿ ಬೌದ್ಧಿಕ ರಾಜಕೀಯ, ಸಾಮಾಜಿಕ, ಆರ್ಥಿಕ ಬಲವನ್ನು ಹೆಚ್ಚಿಸಿಕೊಳ್ಳುದಾಗಿದೆ. ಅಂದರೆ ಮಹಿಳೆಯರು ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದುವಂತೆ ಮಾಡುವುದು ಮಹಿಳೆಯರ ಇಚ್ಚೆಗೆ ಅನುಸಾರ ಆಯ್ಕೆ ಮಾಡುವ ಅವಕಾಶವನ್ನು ನೀಡುವುದು. ಆದರೆ ಭಾರತೀಯರಾದ ನಾವುಗಳು

‘‘ಯತ್ರನಾರ್ಯಸ್ತು ಪೂಜ್ಯಂತೆ ರಮಂತೇ ತತ್ವದೇವತಾ’’ ಎಂಬುದಾಗಿ ಮಹಿಳೆಗೆ ಸಮಾಜದಲ್ಲಿ ಪೂಜನೀಯ ಸ್ಥಾನವನ್ನು ಕೊಟ್ಟುಕೊಂಡು ಇನ್ನೊಂದೆಡೆಯಲ್ಲಿ ಕೈಯಲ್ಲಿ ಬೆತ್ತ ಹಿಡಿದು ಲಕ್ಷ್ಮಣ ರೇಖೆಗಳನ್ನು ದಾಟದಂತೆ ನಿರ್ಬಂಧ ವಿಧಿಸಿದ್ದೇವೆ. ಮನುಸ್ಮೃತಿಯು ಮಹಿಳೆಯರಿಂದ ಕಿತ್ತುಕೊಂಡ ಹಕ್ಕುಗಳನ್ನು ಮರುಸ್ಥಾಪಿಸಲು ಅಂಬೇಡ್ಕರ್‌ರು ಶ್ರಮಿಸಿದರು. ಮಹಿಳೆಯರು ಸಾಮಾಜಿಕವಾಗಿ ಸಬಲಗೊಳ್ಳಬೇಕು ಅವಳಿಗೆ ಅವಳದ್ದೇ ಸ್ವಾತಂತ್ರ್ಯವಿದೆ ಎಂದು ಅರ್ಥೈಸಿಕೊಂಡಿರುವ ಅಂಬೇಡ್ಕರ್‌ರು ಮಹಿಳೆಯರು ಎದುರಿಸುವ ಜೈವಿಕ ದೈಹಿಕ ಕಷ್ಟಗಳ ಕುರಿತು ಚಿಂತನೆ ನಡೆಸುತ್ತಾರೆ. ಅವರು ಮಹಿಳೆಯರಿಗೆ – ‘‘ನಿಮ್ಮ ಬಟ್ಟೆ ತೇಪೆಯಿಂದ ಕೂಡಿದ್ದರೇನಾಯಿತು? ಸ್ವಚ್ಛವಾಗಿರಿ. ನಮ್ಮನ್ನು ನೀವೇ ಮುಟ್ಟಿಸಿಕೊಳ್ಳವವರೆಂದು ಭಾವಿಸಬೇಡಿ. ನಿಮ್ಮ ಮಕ್ಕಳನ್ನು ಅದರಲ್ಲೂ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಿ, ಮಕ್ಕಳ ಮನಸ್ಸಿನ ಕೀಳರಿಮೆ ತೆಗೆದು ಅವರಲ್ಲಿ ಆತ್ಮಗೌರವ ತುಂಬಿ ಮಹಾನ್ ವ್ಯಕ್ತಿಗಳಾಗಲು ಹುಟ್ಟಿದ್ದಾರೆಂದು’’ ಅವರಿಗೆ ತಾತ್ವಿಕ ಬೆಂಬಲವನ್ನು ನೀಡುತ್ತಾರೆ. ಅಲ್ಲದೇ ಹೆಣ್ಣು ಮಕ್ಕಳಿಗೆ ‘‘ಮದುವೆಗೆ ಅವಸರ ಪಡಿಸಬೇಡಿ ಮದುವೆಯಾದ ಹೆಣ್ಣು, ಗಂಡನ ಪಕ್ಕ ಸರಿಸಮಾನಳಾಗಿ ನಿಲ್ಲಬೇಕು. ದಾಸಿಯಂತಲ್ಲ ತುಂಬಾ ಮಕ್ಕಳನ್ನು ಹೆರಬೇಡಿ. ಹೆತ್ತು ಹೆತ್ತು ಮಕ್ಕಳನ್ನು ಸಾಕುವುದರಲ್ಲೇ ಹೆಣ್ಣು ಮಕ್ಕಳು ಹೈರಾಣಾಗುತ್ತಿದಾರೆಂದು ಅವರ ಶಕ್ತಿ ಸಾಮರ್ಥ್ಯವನ್ನು ಸಮಾಜ ಉಪಯೋಗಿಸಿಕೊಳ್ಳಬೇಕೆಂದರೆ ಕುಟುಂಬ ಯೋಜನೆ ಅವಶ್ಯವೆಂದು ಪ್ರತಿಪಾದಿಸುತ್ತಾ ಸರ್ಕಾರದ ಮೇಲೆ ಒತ್ತಡವನ್ನು ಹೇರುತ್ತಾರೆ. ಅಂಬೇಡ್ಕರ್ ಅವರ ತಾತ್ವಿಕ ಬೆಂಬಲ ಮತ್ತು ಸಂಘಟನೆಗಳ ಬಲದೊಂದಿಗೆ ಮಹಿಳಾ ಸಂಘಟನೆಗಳು ಜಾಗೃತಗೊಂಡವು. ಪರಿಣಾಮವಾಗಿ ಮಹಿಳಾ ಹಾಸ್ಟೆಲ್ ಮತ್ತು ಶಾಲೆಗಳನ್ನು ತೆರೆಯಲಾಯಿತು.

ಅಲ್ಲದೇ ಅಂಬೇಡ್ಕರ್‌ರು ಕಾರ್ಮಿಕ ಸಚಿವರಾಗಿದ್ದಾಗ ಹೆರಿಗೆ ಭತ್ಯೆ ನೀಡುವ ಬಗ್ಗೆ ಪ್ರಸ್ತಾಪಿಸಿದರು. ಕಾನೂನು ಮಂತ್ರಿಯಾಗಿದ್ದ ಸಂದರ್ಭದಲ್ಲಿ ಪರಿಷ್ಕೃತ ಹಿಂದೂ ಕೋಡ್‌ಬಿಲ್ ಅನ್ನು ಮಂಡಿಸುವುದರ ಮೂಲಕ ಮಹಿಳೆಗೆ ವಿಚ್ಛೇದನಕ್ಕೆ ಅವಕಾಶ ನೀಡಲಾಯಿತು. ವಿಧವೆಗೆ ಗಂಡನ ಆಸ್ತಿಯ ಪೂರಾ ಹಕ್ಕು ಹಾಗೂ ಮದುವೆಯಾದ ಹೆಣ್ಣುಮಕ್ಕಳಿಗೆ ತವರಿನ ಆಸ್ತಿ ಹಕ್ಕುಗಳು ಪ್ರಸ್ತಾಪಿಸಲ್ಪಟ್ಟವು. ಜಾತಿ ವಿನಾಶವಾಗದ ಹೊರತು ಹೆಣ್ಣಿಗೆ ಪರಿಪೂರ್ಣ ಬಿಡುಗಡೆ ಒದಗಲಾರದೆಂದು ಭಾರತದ ಇಂದಿನ ಸ್ತ್ರೀವಾದಿಗಳು ಮಹಿಳೆಯರು ಅರ್ಥ ಮಾಡಿಕೊಂಡಿರುವುದು ಅಂಬೇಡ್ಕರ್‌ರ ಜಾತಿ ವಿಶ್ಲೇಷಣೆಯನ್ನು ಓದಿದ ಬಳಿಕ ಅಂದರೆ ಜಾತಿ ವ್ಯವಸ್ಥೆಯ ಉಪ ಉತ್ಪನ್ನವಾದ ಪಿತೃಪ್ರಾಧಾನ್ಯತೆಯ ಆಳವಿಸ್ತಾರಗಳನ್ನರಿಯಲು ಸಾಧ್ಯವಾಗಿಸಿದ್ದೂ ಅಂಬೇಡ್ಕರ್‌ರ ಚಿಂತನೆಗಳೇ ಎಂದು ಹೇಳಬಹುದು.

ಮಹಿಳೆಯರ ಹಕ್ಕುಗಳ ರಕ್ಷಣೆಯ ನಿಟ್ಟಿನಲ್ಲಿ ಅಂಬೇಡ್ಕರ್ ಅವರು ಅಂದು

ರೂಪಿಸಿದ ಮಸೂದೆಗಳಲ್ಲಿ ಹಿಂದೂ ಕೋಡ್ ಬಿಲ್ ಮುಖ್ಯವಾಗಿತ್ತು. 7 ಅಂಶಗಳನ್ನು ಒಳಗೊಂಡಿರುವ ಈ ಮಸೂದೆಯಲ್ಲಿ ಆಸ್ತಿಯ ಹಂಚಿಕೆ, ಆಸ್ತಿಯ ವಾರಸುದಾರರನ್ನು ಪಟ್ಟಿ ಮಾಡುವುದು. ಜೀವನಾಂಶ, ಮದುವೆ, ವಿಚ್ಛೇದನ ದತ್ತು ಸ್ವೀಕಾರ – ಈ ಎಲ್ಲಾ ಮಹಿಳಾ ಪರವಾದ ವಿಚಾರಗಳಿಗಾಗಿ ಹೋರಾಟ ನಡೆಸಿದವರು. ಅಂಬೇಡ್ಕರ್‌ರು ಅವರ ಹೋರಾಟದ ಫಲವೇ ಇಂದು ಮಹಿಳೆಯರು ಸ್ವಚ್ಛಂದವಾಗಿ ಜೀವಿಸಲು ಸಹಕಾರಿಯಾಗಿದೆ.

ಆಸ್ತಿಯಲ್ಲಿ ಮಹಿಳೆಯರಿಗೆ ಪಾಲುಗಾರಿಕೆ ಬಗ್ಗೆ ಮೊದಲಿಗೆ ಅಂಬೇಡ್ಕರ್‌ರು ಚಿಂತನೆ ನಡೆಸಿ ಆಸ್ತಿ ವಾರಸುದಾರರಿಗೆ ಸಂಬಂಧಿಸಿದಂತೆ ಮಹಿಳೆಯರ ಪರವಾಗಿ ಬದಲಾವಣೆ ತಂದರು. ಅದುವರೆಗೂ ನಿಯಮದಲ್ಲಿ ಕೇವಲ ಮಗನಷ್ಟೇ ವಾರಸುದಾರನಾಗಿರುತ್ತಿದ್ದ ಆದರೆ ಅಂಬೇಡ್ಕರ್‌ರು ಆತನ ವಾರಸುದಾರರಿಗೆ ಮಕ್ಕಳು, ವಿಧವೆ ಮಗಳು ಈಗಾಗಲೇ ಮರಣ ಹೊಂದಿರುವಂತಹ ಮಗನ ವಿಧವಾ ಪತ್ನಿ ಇವರೆಲ್ಲರಿಗೂ ಮಗನಷ್ಟೇ ಸಮಾನವಾದ ಹಕ್ಕು ಬರುವಂತೆ ಮಾಡಿದರು. ಪರಿಣಾಮವಾಗಿ ಹೆಣ್ಣು ಮಕ್ಕಳು ತಂದೆಯ ಆಸ್ತಿಯಲ್ಲಿ ವಾರಸುದಾರರಾದರು. ಇಲ್ಲಿ ಕಾನೂನಾತ್ಮಕವಾಗಿ ಮಹಿಳೆಗೆ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟರು.

ಮಹಿಳೆಯರಿಗೆ ಮದುವೆ ಮತ್ತು ವಿಚ್ಛೇದನದ ಹಕ್ಕನ್ನು ಒದಗಿಸಿಕೊಟ್ಟರು. ಅಂಬೇಡ್ಕರ್ ರೂಪಿಸಿದ ಮದುವೆಯ ನಿಯಮದಲ್ಲಿ ಜಾತಿ ಮತ್ತು ಉಪಜಾತಿ ಕಡ್ಡಾಯವಾಗಿ ನಮೂದಿಸುವುದನ್ನು ಕೈ ಬಿಟ್ಟರು. ಪ್ರಾಪ್ತ ವಯಸ್ಕರಾಗಿದ್ದರೆ ಸಾಕು ಅವರು ಯಾವುದೇ ಜಾತಿ–ಉಪಜಾತಿಯವರಾಗಿದ್ದರೂ ಮದುವೆಗೆ ಸಿಂಧು ಎಂದು ನಿಯಮ ರೂಪಿಸಿದರು. ಈ ಹಿಂದೆ ಮದುವೆ ವಿಚ್ಛೇದನಕ್ಕೆ ಅವಕಾಶ ಇರಲಿಲ್ಲ. ಆದರೆ ಅಂಬೇಡ್ಕರ್ ಅವರು ಮಹಿಳೆಯರಿಗೂ ವಿಚ್ಛೇದನ ಪಡೆಯುವ ಹಕ್ಕು ಒದಗಿಸಿಕೊಟ್ಟರು. ಅಲ್ಲದೆ ಬಹುಪತ್ನಿತ್ವ ನಿಯಮವನ್ನು ಹೋಗಲಾಡಿಸಿ ಏಕ ಪತ್ನಿತ್ವ ನಿಯಮವನ್ನು ವಿವಾಹ ಕಾನೂನಿಗೆ ಸೇರಿಸಿದರು.

ಹೀಗೆ ಮಹಿಳೆಯರ ರಕ್ಷಣೆಯ ನಿಟ್ಟಿನಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ಒಳಗೊಂಡ ಮಸೂದೆಯನ್ನು ಅಂಬೇಡ್ಕರ್‌ರು ರೂಪಿಸಿ, ಸಂಸತ್ತಿನಲ್ಲಿ ಮಂಡನೆ ಮಾಡುವುದರ ಮೂಲಕ ಮಹಿಳೆಯರಿಗಾಗಿ ಅವರ ಹಕ್ಕು, ಸ್ವಾತಂತ್ರ್ಯಗಳಿಗಾಗಿ ಧ್ವನಿಯೆತ್ತಿದ ಮಹಾನ್ ವ್ಯಕ್ತಿಯಾಗಿ ಪರಿಣಮಿಸಿದರು.

ಭಾರತದಲ್ಲಿ ಮಹಿಳಾ ಸಬಲೀಕರಣವು ಹಲವಾರು ಸವಾಲುಗಳು ಮತ್ತು ಅಡೆತಡೆಗಳನ್ನು ಎದುರಿಸುತ್ತಿದೆ. ಮಹಿಳಾ ಸಬಲೀಕರಣವು ಆರ್ಥಿಕ, ರಾಜಕೀಯ, ಸಾಮಾಜಿಕ, ಶಿಕ್ಷಣ, ಕಾನೂನು ಈ ಮುಂತಾದ ಜೀವನದ ವಿವಿಧ ಅಂಶಗಳನ್ನು ಒಳಗೊಂಡಿರುತ್ತದೆ. ಮಹಿಳಾ ಸಬಲೀಕರಣವು ಲಿಂಗ ಸಮಾನತೆಯನ್ನು ಸಾಧಿಸಲು

ನಿರ್ಣಾಯಕ ಮಾತ್ರವಲ್ಲ, ಇದು ಭಾರತದ ಪ್ರಗತಿ ಮತ್ತು ಅಭಿವೃದ್ಧಿಗೆ ಪೂರಕವಾಗಿರುವುದು. ಆದ್ದರಿಂದ ಮಹಿಳೆಯರು ತಿಳಿವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಮಾಜಿಕ, ಅರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಭಾಗವಹಿಸಲು ಮತ್ತು ಲಿಂಗ ಅಸಮಾನತೆಗಳನ್ನು ಪ್ರಶ್ನಿಸಲು ಸಜ್ಜುಗೊಳ್ಳಬೇಕಾಗಿದೆ. ಅಂಬೇಡ್ಕರ್‌ರ ಅಭಿಪ್ರಾಯದಂತೆ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಮಹಿಳೆಯರ ಸಬಲೀಕರಣವು ಸಮುದಾಯದ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುವುದು.

ಆದ್ದರಿಂದಲೇ ಡಾ. ಬಿ. ಆರ್. ಅಂಬೇಡ್ಕರ್‌ರು ದಲಿತರು ಕಾರ್ಮಿಕರ ಸುಧಾರಣೆಯೊಂದಿಗೆ ದೇಶದ ಮಹಿಳೆಯರ ಸಬಲೀಕರಣಕ್ಕೆ ಹೆಚ್ಚು ಆದ್ಯತೆ ನೀಡಿದರು. ಮಹಿಳೆಯರು ವಿಮೋಚನೆಗೊಂಡರೆ ಸಮಾಜದ ಸ್ಥಿತಿಗಳನ್ನು ಸುಧಾರಿಸಬಲ್ಲರು. ಜಾತಿ–ಪದ್ಧತಿ ಹೋಗಲಾಡಿಸಲು ಮಹಿಳೆಯರು ಶಿಕ್ಷಣವಂತರಾಗಬೇಕು. ಎಲ್ಲಾ ವರ್ಗದ ಸ್ತ್ರೀಯರು ಪರಿಪೂರ್ಣ ಮಾನಸಿಕ ಬೌದ್ಧಿಕ ಬೆಳವಣಿಗೆಗೆ ವೈಜ್ಞಾನಿಕ ಶಿಕ್ಷಣವನ್ನು ಪಡೆಯಬೇಕೆಂದು ಜಾತಿ–ನಿರ್ಮೂಲನೆಗಾಗಿ ಅಂತರ್ಜಾತಿ ವಿವಾಹದ ಸೂತ್ರವನ್ನು ಪ್ರತಿಪಾದಿಸಿದರು.

**ಪರಾಮರ್ಶನ ಗ್ರಂಥಗಳು:**

1. ವಿಕಾಸ್ ಆರ್. ಮೌರ್ಯ, (2023), ಅಂಬೇಡ್ಕರ್ ಜಗತ್ತು, ಜೀರುಂಡೆ ಪುಸ್ತಕಾಲಯ, ಬೆಂಗಳೂರು.
2. ಪೋತೆ ಎಚ್. ಟಿ. , (2023), ಎಲ್ಲರ ಅಂಬೇಡ್ಕರ್, ಜನ ಪ್ರಕಾಶನ, ಬೆಂಗಳೂರು.
3. ವಿಕಾಸ್ ಆರ್. ಮೌರ್ಯ, (2021), ಅಂಬೇಡ್ಕರ್ ಸಿದ್ಧಾಂತ, ದಲಿತ ಸಂಘರ್ಷ ಸಮಿತಿ, ಚಿಕ್ಕಬಳ್ಳಾಪುರ.
4. ಅಂಬೇಡ್ಕರ್ ಬಿ. ಆರ್. (ಮೂಲ), ವಿವಿಧ ಲೇಖಕರು (ಅನು), (2015), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.